
# ಅಸಾಹಿತ್ಯಿಕ ಅಸಮಾಧಾನ!

**ಕೇಂ**ದ್ರ ಸಾಹಿತ್ಯ ಅಕಾಡೆಮಿ ಕೊಡುವ 2017ನೇ ಸಾಲಿನ ಯುವಪುರಸ್ಕಾರ ಸಮಕಾಲೀನ ಲೇಖಕರ ಅಸಮಾಧಾನಕ್ಕೆ ಕಾರಣವಾಗಿದೆ. ಶಾಂತಿ ಕೆ. ಅಪ್ಪಣ್ಣ ಅವರ ಕಥಾಸಂಗ್ರಹ 'ಮನಸು ಅಭಿಸಾರಿಕೆ'ಗೆ ಈ ಪುರಸ್ಕಾರ ಬಂದಿದೆ. ತಾವು ಬಯಸಿದ, ತಮ್ಮ ವಲಯದ ಲೇಖಕರಿಗೆ, ಇಲ್ಲವೇ ತಮಗೇ ಈ ಪುರಸ್ಕಾರ ಬರಬೇಕಿತ್ತು ಎಂಬುದು ಇವರೆಲ್ಲರ ಗೊಣಗಾಟದ ಒಟ್ಟೂ ಅರ್ಥ ಮತ್ತು ಒಳದನಿಯಾಗಿರುವಂತೆ ಕಾಣುತ್ತದೆ.

ಪ್ರಶಸ್ತಿಗಳ ಬಗ್ಗೆ ಮೊದಲಿನಿಂದಲೂ ಗೊಣಗಾಟ, ಅಸಹನೆ, ಅಸಮಾಧಾನ ಸಾಹಿತ್ಯ ವಲಯದಲ್ಲಿ ಇದ್ದೇ ಇದೆ. 2011ರಿಂದ ಆರಂಭವಾದ ಯುವಪುರಸ್ಕಾರ ಈ ತನಕ ಆರು ಯುವಲೇಖಕರಿಗೆ ಬಂದಿದೆ. ಕನ್ನಡ ಪುಸ್ತಕಗಳಿಂದಲೇ ಜನರು ದೂರವಾಗುತ್ತಿರುವ ಕಾಲದಲ್ಲಿ ಲೇಖಕರಿಗೆ ಕೊಡಲಾಗುವ ಪ್ರಶಸ್ತಿ, ಪುರಸ್ಕಾರಗಳ ಸಂಖ್ಯೆ ಹೆಚ್ಚುತ್ತಿರುವುದು ವರ್ತಮಾನದ ವ್ಯಂಗ್ಯವಾಗಿದೆ. ಯುವಲೇಖಕರನ್ನು ಉತ್ತೇಜಿಸಲು ಕೊಡಲಾಗುವ ಈ ಪುರಸ್ಕಾರ ಪಡೆದವರಲ್ಲಿ ಎಷ್ಟು ಮಂದಿ ಉತ್ತಮವಾದುದ್ದನ್ನು ಬರೆದಿದ್ದಾರೆ? ಮತ್ತು ಸಾಹಿತ್ಯ ರಚನೆಯನ್ನು ಮುಂದುವರಿಸಿದ್ದಾರೆ? ಎಂಬ ಪ್ರಶ್ನೆಗಳಿಗೆ ಉತ್ತರಗಳಿಲ್ಲ. ಅದು ಲೇಖಕರಿಗೆ ಉತ್ತೇಜನ ನೀಡುವ ಬದಲಾಗಿ ತಲೆಸುತ್ತುವಂತೆ, ನಿಂತ ನೆಲವನ್ನು ಮರೆಯುವಂತೆ ಮಾಡಿದೆ. ಇಂತಹ ಪುರಸ್ಕಾರಗಳು ಯುವಲೇಖಕರಲ್ಲಿ 'ಎನ್ನಯ ಸಮಾನರಿಲ್ಲ' ಎಂಬ ಭ್ರಮೆಗೆ ದಾರಿಮಾಡಿಕೊಡಬಹುದು. ತಮ್ಮ ಅಖಂಡ ಪ್ರತಿಭೆಗೆ ಸಂದಿರುವ ಅದು 'ಕೀರ್ತಿಶೇಷ'ರಾಗಿ ಉಳಿದುಕೊಳ್ಳಲು ಸಹಕಾರಿ ಎಂಬ ಭಾವನೆಯನ್ನು ಹುಟ್ಟಿಸುತ್ತದೆ. ಅಲ್ಲಿಗೆ ಅವರ ಸಾಹಿತ್ಯ ರಚನೆ ಹಳ್ಳಹಿಡಿದಂತೆಯೇ ಸರಿ.

ಈ ಪುರಸ್ಕಾರಕ್ಕೂ ಸಾಹಿತ್ಯ ಅಕಾಡೆಮಿ ಅರ್ಜಿ ಆಹ್ವಾನಿಸುತ್ತದೆ. ಸರ್ಕಾರದ ಹಲವು ಯೋಜನೆಗಳಂತೆಯೇ ಇದೂ ಕೂಡ. ಈ ಸಾಹಿತ್ಯಿಕ ಅನುದಾನ ವರ್ಷಕ್ಕೆ ಒಬ್ಬ ಲೇಖಕರಿಗೆ ಮಾತ್ರ ಸಿಗುವುದು ಹಲವರಲ್ಲಿ ನಿರಾಶೆಯನ್ನುಂಟುಮಾಡುತ್ತದೆ. ಅದರಲ್ಲಿ ಉದಯೋನ್ಮುಖರೂ, ಅಸ್ತೋನ್ಮುಖ ಸಾಹಿತಿಗಳೂ ಸೇರಿರುತ್ತಾರೆ. ಈ ಮಾಯಾಜಿಂಕೆ ಕೈಗೆ ಸಿಗದೇ ದುಃಖದ ಕೊಳದಲ್ಲಿ ಮುಳುಗುತ್ತಾರೆ. ಅವರಿಗೆ ತಮ್ಮ ನೋವನ್ನು ಹೊರಹಾಕುವ ಮಾಧ್ಯಮವಾಗಿ ಸಾಮಾಜಿಕ ಜಾಲತಾಣಗಳು ಒದಗಿ ಬರುತ್ತವೆ.

ಕನ್ನಡದಲ್ಲೇ ಲಂಕೇಶ್, ಪುತಿನ, ತೇಜಸ್ವಿ, ಚಿತ್ತಾಲ ತರಹದವರಿಗೆ ಜ್ಞಾನಪೀಠದಂತಹ ಪ್ರಶಸ್ತಿಗಳು ಬರಲಿಲ್ಲ. ಅವರೆಲ್ಲರೂ ಪ್ರಶಸ್ತಿಗಳನ್ನು ಮೀರಿದ ಬರಹಗಳನ್ನು ಬರೆದವರು. ಮತ್ತು ಅವರೆಲ್ಲರ ನೆನಪು ಕನ್ನಡಿಗರಿಗೆ ಆಗುವುದು ಅವರ ಬರಹಗಳ ಮೂಲಕವೇ ಹೊರತು, ಪ್ರಶಸ್ತಿ, ಪುರಸ್ಕಾರಗಳಿಂದಲ್ಲ. ಪ್ರಶಸ್ತಿಗಳು ಏನಿದ್ದರೂ ಶಾಲೆಯ ಮಕ್ಕಳ ಪಠ್ಯದಲ್ಲಿ ಒಂದು ಅಂಕದ ಪ್ರಶ್ನೆಗಳಾಗಿ ಉಳಿದಿರುತ್ತವೆ!



ಇದರ ಹೊರತಾಗಿ ನೋಡಿದರೂ ಅನೇಕ ಯುವಲೇಖಕರ ಬರಹಗಳು ಓದುಗರನ್ನು ಕಾಡುವ, ತಾಕುವ ಸ್ಥಿತಿಯಲ್ಲೇ ಇರುವುದಿಲ್ಲ. ಅವುಗಳಿಗೆ ಆಗಲೇ ಅಕಾಲ ವೃದ್ಧಾಪ್ಯ ಬಂದಿರುತ್ತದೆ. ಬರವಣಿಗೆಯಲ್ಲಿನ ಜೀವಂತಿಕೆ ಪ್ರಶಸ್ತಿಗಳಿಂದ ಹೊಮ್ಮುವುದಿಲ್ಲ; ಬದುಕು ಮತ್ತು ಅದರಿಂದ ಹುಟ್ಟುವ ಅನುಭವಕ್ಕೆ ಮುಖಾಮುಖಿಯಾಗಿ ನಿಂತು ಅದನ್ನು ಮಾತುಗಳಲ್ಲಿ ಮಂಡಿಸಿದಾಗ ಬರುತ್ತದೆ. ಅಂದಹಾಗೆ ಇಂತಹ ಸಂಗತಿಗಳ ಬಗ್ಗೆ ಹಿರಿಯ ಲೇಖಕರು ಮಾತನಾಡದಿರುವುದು ಈ ಕಾಲದ ಬಹಳ ಅರ್ಥಪೂರ್ಣ ಸಂಗತಿಯಾಗಿದೆ.

**ಸಂದೀಪ ನಾಯಕ**